**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ. ಸಂಖ್ಯೆ: 513/2023**

ಫಿರ್ಯಾದುದಾರರು:- ಅಬಕಾರಿ ನಿರೀಕ್ಷಕರು

-ವಿರುದ್ಧ-

ಆರೋಪಿ/ತರು: - ಎನ್.ಪಿ.ಚೇತನ್

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಪ್ರಕಾರ ಆರೋಪಿ/ತರ ಹೇಳಿಕೆ/ಮರುಹೇಳಿಕೆ**

ಪ್ರ:1) ಅಭಿಯೋಜನೆಯ ಪರ ಸಾಕ್ಷಿದಾರರು ನಿಮ್ಮ ವಿರುದ್ಧ ಕೊಟ್ಟಿರುವ ಹೇಳಿಕೆಗಳನ್ನು ಕೇಳಿದ್ದೀರಾ?

ಉ:

ಪ್ರ:2) ಪ್ರಾ.ಸಾ-1 – ಮಂಜುನಾಥ, ಅಬಕಾರಿ ಪೊಲೀಸ್, ತರೀಕೆರೆ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 04-11-2022 ರಂದು ಬೆಳಗ್ಗೆ ಇಲಾಖಾ ವಾಹನದಲ್ಲಿ ಚಾಸಾ-3 ರವರೊಂದಿಗೆ ನಾನು ಮತ್ತು ಚಾಸಾ-2 ರವರು ಗಸ್ತು ಕರ್ತವ್ಯದಲ್ಲಿದ್ದಾಗ ಚಾಸಾ-3 ರವರಿಗೆ ಅಜ್ಜಂಪುರ ತಾಲ್ಲೂಕಿನ ನಾಗವಂಗಲ ಗೇಟ್ ಹತ್ತಿರ ಒಬ್ಬ ಆಸಾಮಿ ಮದ್ಯ ಸಾಗಾಣಿಕೆ ಮಾಡುತ್ತಿದ್ದಾನೆ ಎಂಬ ಮಾಹಿತಿ ಬಂದಿದ್ದಾಗಿ,

ಸದರಿ ಸಾಕ್ಷಿದಾರರು ಮುಂದುವರೆದು, ಸದರಿ ಮಾಹಿತಿ ಆಧಾರದ ಮೇರೆಗೆ ನಾವು ಪಂಚರೊಂದಿಗೆ ಮಾಹಿತಿ ಬಂದ ಸ್ಥಳಕ್ಕೆ ಹೋದಾಗ ಅಲ್ಲಿ ಒಬ್ಬ ಆಸಾಮಿ ಕಪ್ಪು ಕವರನ್ನು ಹಿಡಿದುಕೊಂಡು ನಿಂತಿರುವುದು ಕಂಡುಬಂದಿದ್ದು, ನಂತರ ಅನುಮಾನ ಬಂದು ನಾವು ದಾಳಿ ಮಾಡಿದಾಗ ಆತನು ಓಡಿ ಹೋಗಲು ಪ್ರಯತ್ನಿಸಿದಾಗ ಆತನನ್ನು ಹಿಡಿದು ಆತನ ಬಗ್ಗೆ ವಿಚಾರಣೆ ಮಾಡಿದ್ದಾಗಿ,

ಸದರಿ ಸಾಕ್ಷಿದಾರರು ಮುಂದುವರೆದು, ನಂತರ ಆತನ ಬಳಿ ಇದ್ದ ಪ್ಲಾಸ್ಟಿಕ್ ಕವರನ್ನು ಪರಿಶೀಲಿಸಿದಾಗ ಅದರಲ್ಲಿ 90 ಎಂ ಎಲ್ ನ 40 ರಾಜಾ ವಿಸ್ಕಿ ಪೌಚುಗಳು ಇದ್ದವು. ಅವುಗಳನ್ನು ಇಟ್ಟುಕೊಳ್ಳಲು ಅಥವಾ ಸಾಗಾಣಿಕೆ ಮಾಡಲು ವ್ಯಕ್ತಿ ಬಳಿ ಯಾವುದೇ ಪರವಾನಿಗೆ ಇರಲಿಲ್ಲ. ಅದಲ್ಲದೇ ಆತನ ಬಳಿ 150/- ರೂ. ನಗದು ಹಣ ಕೂಡ ಇತ್ತು. ಚಾಸಾ-3 ರವರು ತನ್ನ ಮತ್ತು ಚಾಸಾ-2 ರವರ ಸಮಕ್ಷಮ ಪಂಚನಾಮೆ ಜರುಗಿಸಿ

ಮದ್ಯವನ್ನು ಮತ್ತು ಆರೋಪಿಯನ್ನು ತಮ್ಮ ವಶಕ್ಕೆ ಪಡೆದುಕೊಂಡು ನಂತರ ಆರೋಪಿ ಮತ್ತು ಮುದ್ದೆಮಾಲಿನೊಂದಿಗೆ ಕಛೇರಿಗೆ ಬಂದಿದ್ದು ತದನಂತರ ಚಾಸಾ-3 ರವರು ಮುಂದಿನ ಕ್ರಮ ತೆಗೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ3) ಪ್ರಾ.ಸಾ-2 – ಶ್ವೇತ ಬಿ, ಅಬಕಾರಿ ನಿರೀಕ್ಷಕರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 04-11-2022 ರಂದು ತಾನು ಅಜ್ಜಂಪುರ ತಾಲ್ಲೂಕಿನ ಕುಡ್ಲೂರು ಮಾರ್ಗದಲ್ಲಿ ಸಿಬ್ಬಂದಿಯೊಂದಿಗೆ ಗಸ್ತು ಕರ್ತವ್ಯದಲ್ಲಿದ್ದಾಗ ನಾಗವಂಗಲ ಗೇಟ್ ಹತ್ತಿರ ಒಬ್ಬ ವ್ಯಕ್ತಿ ಅಕ್ರಮವಾಗಿ ಮದ್ಯ ಸಂಗ್ರಹಿಸಿ ಮಾರಾಟ ಮಾಡುತ್ತಿದ್ದಾನೆ ಎಂಬ ಮಾಹಿತಿ ಬಂದಿದ್ದಾಗಿ,

ಸದರಿ ಸಾಕ್ಷಿದಾರರು ಮುಂದುವರೆದು, ಸದರಿ ಮಾಹಿತಿ ಆಧಾರದ ಮೇರೆಗೆ ನಾನು ಸಿಬ್ಬಂದಿಯೊಂದಿಗೆ ಮಾಹಿತಿ ಬಂದ ಸ್ಥಳಕ್ಕೆ ಹೋದಾಗ ಅಲ್ಲಿ ಒಬ್ಬ ವ್ಯಕ್ತಿಯ ಕೈಯಲ್ಲಿ ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರನ್ನು ಹಿಡಿದುಕೊಂಡು ನಿಂತಿರುವುದು ಕಂಡುಬಂದಿದ್ದು ನಂತರ ಅನುಮಾನ ಬಂದು ನಾವು ದಾಳಿ ಮಾಡಿದಾಗ ಆತನು ಓಡಿ ಹೋಗಲು ಪ್ರಯತ್ನಿಸಿದಾಗ ಆತನನ್ನು ಹಿಡಿದು ಆತನ ಬಗ್ಗೆ ವಿಚಾರಣೆ ಮಾಡಿದ್ದಾಗಿ,

ಸದರಿ ಸಾಕ್ಷಿದಾರರು ಮುಂದುವರೆದು, ನಂತರ ಆತನ ಬಳಿ ಇದ್ದ ಪ್ಲಾಸ್ಟಿಕ್ ಕವರನ್ನು ಪರಿಶೀಲಿಸಿದಾಗ ಅದರಲ್ಲಿ 90 ಎಂ ಎಲ್ ನ 40 ರಾಜಾ ವಿಸ್ಕಿ ಪೌಚುಗಳು ಇದ್ದವು. ಅವುಗಳನ್ನು ಇಟ್ಟುಕೊಳ್ಳಲು ಅಥವಾ ಸಾಗಾಣಿಕೆ ಮಾಡಲು ವ್ಯಕ್ತಿ ಬಳಿ ಯಾವುದೇ ಪರವಾನಿಗೆ ಇರಲಿಲ್ಲ. ನಂತರ ತನ್ನ ಸಿಬ್ಬಂದಿ ಸಮಕ್ಷಮದಲ್ಲಿ ಪಂಚನಾಮೆ ಜರುಗಿಸಿ ಮುದ್ದೆಮಾಲನ್ನು ತನ್ನ ವಶಕ್ಕೆ ಪಡೆದುಕೊಂಡಿದ್ದಾಗಿ,

ಸದರಿ ಸಾಕ್ಷಿದಾರರು ಮುಂದುವರೆದು, ಅಲ್ಲದೇ ಆತನ ಬಳಿ ಇದ್ದ ರೂ.150/- ಗಳನ್ನು ಕೂಡ ಅಮಾನತ್ತುಪಡಿಸಿಕೊಂಡು ನಂತರ ಆರೋಪಿ ಮತ್ತು ಮುದ್ದೆಮಾಲಿನೊಂದಿಗೆ ಕಛೇರಿಗೆ ಬಂದು ಸರ್ಕಾರದ ತರ್ಫೆ ತಾನೇ ಪ್ರಕರಣವನ್ನು ದಾಖಲಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ4) ಪ್ರಾ.ಸಾ-4 – ಸುಭಲ್ ಕಲಾಜ್, ಅಬಕಾರಿ ಪೇದೆರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 04-11-2022 ರಂದು ಚಾಸಾ-1 ರವರೊಂದಿಗೆ ನಾನು ಗಸ್ತು ಕರ್ತವ್ಯದಲ್ಲಿದ್ದಾಗ

ಚಾಸಾ-3 ರವರಿಗೆ ಅಜ್ಜಂಪುರ ತಾಲ್ಲೂಕಿನ ನಾಗವಂಗಲ ಗೇಟ್ ಹತ್ತಿರ ಒಬ್ಬ ಆಸಾಮಿ ಮದ್ಯ ಸಾಗಾಣಿಕೆ ಮಾಡುತ್ತಿದ್ದಾನೆ ಎಂಬ ಮಾಹಿತಿ ಬಂದಿದ್ದಾಗಿ,

ಸದರಿ ಸಾಕ್ಷಿದಾರರು ಮುಂದುವರೆದು, ಸದರಿ ಮಾಹಿತಿ ಆಧಾರದ ಮೇರೆಗೆ ನಾವು ಪಂಚರೊಂದಿಗೆ ಮಾಹಿತಿ ಬಂದ ಸ್ಥಳಕ್ಕೆ ಹೋದಾಗ ಒಬ್ಬ ಆಸಾಮಿ ಕಪ್ಪು ಕವರನ್ನು ಹಿಡಿದುಕೊಂಡು ನಿಂತಿರುವುದು ಕಂಡು ಬಂದಿದ್ದು, ನಂತರ ಅನುಮಾನ ಬಂದು ನಾವು ದಾಳಿ ಮಾಡಿದಾಗ ಆತನು ಓಡಿ ಹೋಗಲು ಪ್ರಯತ್ನಿಸಿದಾಗ ನಾವು ಆತನನ್ನು ಹಿಡಿದು ವಿಚಾರಣೆ ಮಾಡಿದ್ದಾಗಿ,

ಸದರಿ ಸಾಕ್ಷಿದಾರರು ಮುಂದುವರೆದು, ನಂತರ ಆತನ ಬಳಿ ಇದ್ದ ಪ್ಲಾಸ್ಟಿಕ್ ಕವರನ್ನು ಪರಿಶೀಲಿಸಿದಾಗ ಅದರಲ್ಲಿ 90 ಎಂ ಎಲ್ ನ 40 ರಾಜಾ ವಿಸ್ಕಿ ಪೌಚುಗಳು ಇದ್ದವು. ಅವುಗಳನ್ನು ಇಟ್ಟುಕೊಳ್ಳಲು ಅಥವಾ ಸಾಗಾಣಿಕೆ ಮಾಡಲು ಆತನ ಬಳಿ ಯಾವುದೇ ಪರವಾನಿಗೆ ಇರಲಿಲ್ಲ. ಅದರ ಮೇಲಿನ ಭದ್ರತಾ ಚೀಟಿಗಳನ್ನು ಕೂಡಾ ಹರಿದು ಹಾಕಲಾಗಿತು. ಅದಲ್ಲದೇ ಆತನ ಬಳಿ 150/- ರೂ. ನಗದು ಹಣ ಕೂಡ ಇತ್ತು ಎಂದು,

ಸದರಿ ಸಾಕ್ಷಿದಾರರು ಮುಂದುವರೆದು, ನಂತರ ಚಾಸಾ-3 ರವರು ತನ್ನ ಮತ್ತು ಚಾಸಾ-1 ರವರ ಸಮಕ್ಷಮ ಪಂಚನಾಮೆ ಜರುಗಿಸಿ ಮದ್ಯವನ್ನು ಮತ್ತು ಆರೋಪಿಯನ್ನು ತಮ್ಮ ವಶಕ್ಕೆ ಪಡೆದುಕೊಂಡು ಸ್ಥಳದಲ್ಲಿ ಪಂಚನಾಮೆ ಬರೆದಿದ್ದು, ನಂತರ ಆರೋಪಿ ಮತ್ತು ಮುದ್ದೆಮಾಲಿನೊಂದಿಗೆ ಕಛೇರಿಗೆ ಬಂದು ತದನಂತರ ಚಾಸಾ-3 ರವರು ಮುಂದಿನ ಕ್ರಮ ತೆಗೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ5) ಪ್ರಾ.ಸಾ-3 – ಹೆಚ್.ಪಿ.ಸಂತೋಷ್, ಅಬಕಾರಿ ಉಪನಿರೀಕ್ಷಕರು ರವರು ತಮ್ಮ ಸಾಕ್ಷ್ಯದಲ್ಲಿ ಪ್ರಕರಣದ ಕಡತವನ್ನು ಚಾಸಾ-1 ರವರಿಂದ ದಿನಾಂಕ 07.11.2022 ರಂದು ಪಡೆದುಕೊಂಡು ಚಾಸಾ-1 ಮತ್ತು 2 ರವರ ಹೇಳಿಕೆಗಳನ್ನು ಪಡೆದುಕೊಂಡು, ಮುದ್ದೆಮಾಲನ್ನು ದಿನಾಂಕ 25.11.2022 ರಂದು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿಕೊಟ್ಟು, ದಿನಾಂಕ 27.12.2022 ರಂದು ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡು ನಂತರ ತನಿಖೆಯನ್ನು ಪೂರ್ಣಗೊಳಿಸಿ ಅಂತಿಮ ವರದಿ ಸಲ್ಲಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರ 6) ನಿಮಗೆ ಈ ಕೇಸಿನ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೇ ಅಥವಾ ಲಿಖಿತವಾಗಿ ಹೇಳಿಕೆ ನೀಡುದೇನಾದರೂ ಇದೆಯೇ?

ಉಃ

ಪ್ರ 7) ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ?

ಉಃ

(ಈ ಮೇಲ್ಕಂಡ ಹೇಳಿಕೆಯನ್ನು ನಾನು ಆರೋಪಿಗೆ ಓದಿ ಹೇಳಿ ಆತನು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸಿದ್ದೇನೆ.

ದಿನಾಂಕ ಃ 22.01.2026

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ., ತರೀಕೆರೆ.**